**<u>ರದ್ದತಿ ಮತ್ತು ಉಳಿತಾಯ ಷರತ್ತು :-</u>**

ಹಿಂದೆ ಹೊರಡಿಸಲಾದ ಹಾಗೂ ಈ ಮೇಲೆ ತಿಳಿಸಿರುವ ಸುತ್ತೋಲೆಗಳು ಹಿಂದಿನ ಕಾನೂನಿನ ಅಡಿಯಲ್ಲಿ ಪ್ರಾರಂಬಿಸಲಾದ ಎಲ್ಲಾ ಕ್ರಮಗಳು, ಹಕ್ಕುಗಳು, ಬಾದ್ಯತೆಗಳು, ದಂಡಗಳು ಮತ್ತು ಕಾನೂನು ಪ್ರಕ್ರಿಯೆಗಳು ಸಿಂಧುವಾಗಿರುತ್ತದೆ ಮತ್ತು ಜಾರಿಯಲ್ಲಿರುತ್ತದೆ.

ಹಳೇ ಕಾನೂನಿನ ಅಡಿಯಲ್ಲಿ ತೆಗೆದುಕೊಳ್ಳಲಾದ ಕ್ರಮಗಳನ್ನು ಹೊಸ ಕಾನೂನಿನ ಅಡಿಯಲ್ಲಿಯೂ ಮುಂದುವರೆದಿದೆ ಎಂದು ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸುನೀತಾ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ, ವಿಪತ್ತು ನಿರ್ವಹಣೆ)

**PR-722**

**ಕರ್ನಾಟಕ ಸರ್ಕಾರ**

ಸಂಖ್ಯೆ: RD-TNV/4/2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:01.10.2026

## <u>ಅಧಿಸೂಚನೆ</u>

ದಕ್ಕಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡುವ ಕುರಿತು ರಾಜಕಾರಣಿಗಳು, ಸಾಮಾಜಿಕ ಚಿಂತಕರು, ಸರ್ವದರ್ಮದ ಹಿರಿಯರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಸಂಘಟನೆಗಳಿಂದ ಹಲವಾರು ಮನವಿಗಳು ಸರ್ಕಾರದಲ್ಲಿ ಸ್ವೀಕೃತಗೊಂಡಿರುತ್ತವೆ. ಈ ಕುರಿತು ಸಾರ್ವಜನಿಕರ ಬೇಡಿಕೆ ಹಾಗೂ ಆಡಳಿತಾತ್ಮಕ ಅನುಕೂಲತೆಗಳನ್ನು ಗಣನೆಗೆ ತೆಗೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡಲು ಉದ್ದೇಶಿಸಲಾಗಿದೆ.

ಅದರಂತೆ, ಭಾರತ ಸರ್ಕಾರದ ಗೃಹ ಮಂತ್ರಾಲಯದ ಪತ್ರ ಸಂಖ್ಯೆ: 130/53-Public, ದಿನಾಂಕ: 11.9.1953ರ ಮಾರ್ಗಸೂಚಿಗಳನ್ವಯ ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಸೆಕ್ಷನ್ 4(4A) ರಡಿ ಪ್ರದತ್ತವಾದ ಅಧಿಕಾರದನ್ವಯ ಮತ್ತು ಈ ಸಂಬಂಧ ಅದನ್ನು ಸಬಲಗೊಳಿಸುವ ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡುವ ಕುರಿತು ಸಾರ್ವಜನಿಕರಿಂದ ಯಾವುದೇ ಸಲಹೆ/ ಅಭಿಪ್ರಾಯಗಳು ಸ್ವೀಕೃತವಾದಲ್ಲಿ ಅವುಗಳನ್ನು ಪರಿಶೀಲಿಸಲಾಗುವುದು.

ಈ ಕೆಳಗಿನ ಅನುಸೂಚಿಯಲ್ಲಿ ತಿಳಿಸಿರುವಂತೆ, ದಕ್ಕಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡುವ ಕುರಿತು ಸಾರ್ವಜನಿಕರಿಂದ ಅಭಿಪ್ರಾಯ/ ಸಲಹೆಗಳನ್ನು ಈ ಕೆಳಕಂಡ ವಿಳಾಸಗಳಿಗೆ ಲಿಖಿತ ರೂಪದಲ್ಲಿ ಅಥವಾ ಇ-ಮೇಲ್ ಮೂಲಕ ಈ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದಾಗಿದೆ.

i) ಮಾನ್ಯ ಮುಖ್ಯಮಂತ್ರಿಯವರು ಸಚಿವಾಲಯ , ಕೊಠಡಿ ಸಂಖ್ಯೆ 235,
2ನೇ ಮಹಡಿ, ವಿಧಾನಸೌಧ, ಬೆಂಗಳೂರು-560001-e-mail:cm.kar@nic.in

ii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ, ಕೊಠಡಿ ಸಂಖ್ಯೆ:711, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ || ಬಿ. ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001- e-mail :- prs.revenue@gmail.com

iii) ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ-ಪ್ರಜಾಸೌಧ, ದಕ್ಷಿಣ ಕನ್ನಡ ಜಿಲ್ಲಾಡಳಿತ ಕೇಂದ್ರ , ಜಿಲ್ಲಾಧಿಕಾರಿಗಳ ಕಾರ್ಯಾಲಯ, ಪಡೀಲು, ಮಂಗಳೂರು, ದಕ್ಷಿಣಕನ್ನಡ ಜಿಲ್ಲೆ -575007-e-mail:- dc.mnglr@gmail.com

ಈ ಕೆಳಕಂಡ ಕೋಷ್ಟಕದ ಕಾಲಂ(1)ರಲ್ಲಿ ಈಗಿರುವ ಜಿಲ್ಲೆಯ ಹೆಸರನ್ನು ಕಾಲಂ (2) (3) (4) ರಲ್ಲಿರುವಂತೆ ಮರುನಾಮಕರಣಗೊಳಸಲು ಉದ್ದೇಶಿಸಲಾಗಿದೆ.

| **ಜಿಲ್ಲೆಯ ಈಗಿರುವ ಹೆಸರು** | **ರೋಮನ್ ಲಿಪಿಯಲ್ಲಿನ ಜಿಲ್ಲೆಯ ಹೊಸ ಹೆಸರಿನ ಅಕ್ಷರ ಸಂಯೋಜನೆ** | **ದೇವನಾಗರಿ ಲಿಲ್ಲಿಯಲ್ಲಿನ ಜಿಲ್ಲೆಯ ಹೊಸ ಹೆಸರಿನ ಸಂಯೋಜನೆ** | **ಪ್ರಾದೇಶಿಕ ಭಾಷೆ (ಕನ್ನಡ)** |
|---|---|---|---|
| (1) | (2) | (3) | (4) |
| ದಕ್ಷಿಣ ಕನ್ನಡ ಜಿಲ್ಲೆ | MANGALURU DISTRICT | मंगलुरु ज़िला | ಮಂಗಳೂರು ಜಿಲ್ಲೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ,

**(ರಾಜೆಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ.

**PR-723**

# GOVERNMENT OF KARNATAKA

No.: RC-CFS/418/2026-RC
E- 2313410

Karnataka Government Secretariat
Multi Storied Building
Bengaluru, 560001
Date:30-09-2026

## PRELIMINARY NOTIFICATION

In exercise of the powers conferred by Section 5 of the Karnataka Land Revenue Act 1964 ( Karnataka act no 12 of 1964) and taking into consideration the factors Specified in clauses ( i ) to ( iv ) of rule 3 of the Karnataka Land Revenue Rules 1966such as the population, area of the village the demand under land revenue in the village and other head of the account and having regard to the administrative convenience the Government of Karnataka proposes to issue a Notification to alter the limits of **Ballagere Kaval** Village of **Tumakuru** Taluk of **Tumakuru** District and to constitute a new revenue villages called **Ballagere Kaval Badavane** as specified in schedule.